# ‘ಗಣಿತದಲ್ಲಿ ಸಂಶೋಧನೆ ಮಾಡುವೆ’

## ವಿಜಯಲಕ್ಷ್ಮಿ
### ಕಲರ್ಸ್ ಕನ್ನಡದ ‘ಲಕ್ಷಣ’ದ ನಕ್ಷತ್ರ

**◆ ನಟನೆ ಆರಂಭ ಆಗಿದ್ದು ಹೇಗೆ?**

ನನ್ನೂರು ಕೋಲಾರ ಜಿಲ್ಲೆ ಮಾಲೂರು. ಹೆಸರು ವಿಜಯಲಕ್ಷ್ಮಿ, ತಂದೆ ರಾಧಾಕೃಷ್ಣ, ತಾಯಿ ಉದಯಲಕ್ಷ್ಮಿ. ಎಂಎಸ್‌ಸಿ (ಗಣಿತ) ಮಾಡಿದ್ದೇನೆ. ಅಭಿನಯಿಸುವ ಆಸಕ್ತಿ ಇತ್ತು. ತುಂಬ ಯತ್ನಿಸಿದರೂ ಅವಕಾಶ ಸಿಗುತ್ತಿರಲಿಲ್ಲ. ಎಂಎಸ್‌ಸಿ ಮುಗಿದಿತ್ತು. ಎಲ್ಲೋ ಒಂದು ಹುಡುಕಾಟದಲ್ಲಿ ‘ಕಪ್ಪಗಿದ್ದರೂ ಲಕ್ಷಣವಾಗಿರುವ ಹುಡುಗಿ ಬೇಕು’ ಎನ್ನುವ ಪ್ರಕಟಣೆ ನೋಡಿದೆ. ಒಮ್ಮೆ ಯತ್ನಿಸೋಣ ಎಂದು ಆಡಿಷನ್ ನೀಡಿ ಇದನ್ನು ಪಡೆದುಕೊಂಡೆ. ಪಿಯುಸಿ ಓದುತ್ತಿದ್ದಾಗ ನಮ್ಮ ಕಾಲೇಜಿನಲ್ಲಿ ಡಿಸೆಂಬರ್ 31ರಂದು ನಾಟಕ ಪ್ರದರ್ಶಿಸಲು ತಾಲೀಮು ನಡೆದಿತ್ತು. ನಾನು ನೋಡ್ತಾ ನಿಂತಿದ್ದೆ. ಪಾತ್ರ ನಿರ್ವಹಿಸುತ್ತಿದ್ದ ಹುಡುಗನಿಗೆ ಹೀಗಲ್ಲ ಹೀಗೆ ಮಾಡು ಎಂದು ಹೇಳಿದೆ. ನಮ್ಮ ಅಧ್ಯಾಪಕರು ‘ನೀನು ಮಾರ್ಗದರ್ಶನ ನೀಡುವಷ್ಟು ಕಲಿತಿದ್ದೀಯಾ, ನೀನೇ ಮಾಡು ನೋಡೋಣ’ ಅಂದ್ರು. ನಾನು ಮಾಡಿದೆ, ಚೆನ್ನಾಗಿ ಬಂತು. ನನ್ನನ್ನೇ ಆಯ್ಕೆ ಮಾಡಿಕೊಂಡರು. ಅದನ್ನು ಜಿಲ್ಲಾ ಮಟ್ಟದಲ್ಲಿ ಪ್ರದರ್ಶಿಸುವ ಅವಕಾಶ ಕೂಡ ಬಂತು. ಅದೇ ನನ್ನಲ್ಲಿ ಅಭಿನಯದ ಬಯಕೆಯ ಬೀಜವನ್ನು ಬಿತ್ತಿತು.

**◆ ಅಭಿನಯ ತಾಲೀಮು ಹೇಗಿತ್ತು?**

ಆಡಿಷನ್ ಸಂದರ್ಭದಲ್ಲಿ ಸ್ಕ್ರಿಪ್ಟ್ ನೋಡಿ ಆರ್‌ಜೆ ರೀತಿ ವೇಗವಾಗಿ ಮಾತನಾಡುವುದು ಕಷ್ಟ ಎನಿಸಿತ್ತು. ಮೃದು ಸ್ವಭಾವದ ನನಗೆ ಪಟ ಪಟ ಮಾತನಾಡಬೇಕು ಎನ್ನುವುದು ಸವಾಲಿನ ಕೆಲಸ ಅನಿಸಿತ್ತು. ನಂತರ ದಿನಾ ಎಫ್‌ಎಂ ಕೇಳಲು ಆರಂಭಿಸಿದೆ. ಅದು ನನಗೆ ಸಹಾಯಕ್ಕೆ ಬಂತು. ನಕ್ಷತ್ರ ಕಪ್ಪು ಇದ್ದಾಳೆ. ಅವಳಿಗೆ ಆ್ಯಂಕರ್ ಆಗಬೇಕು ಎಂಬ ಕನಸಿದೆ. ಕಪ್ಪಿರುವ ಕಾರಣಕ್ಕೆ ಯಾರೂ ತೆಗೆದುಕೊಳ್ಳುವುದಿಲ್ಲ. ಅವಳಿಗೆ ಮೈಬಣ್ಣಕ್ಕಿಂತ ತನ್ನ ಪ್ರತಿಭೆಗೆ ಮಾನ್ಯತೆ ಪಡೆಯಬೇಕು ಎನ್ನುವ ಹಂಬಲದ ಹಟ ಇರುತ್ತದೆ. ಟೀವಿ ಆ್ಯಂಕರ್ ಆಗದಿದ್ದರೂ ಆರ್‌ಜೆ ಆಗಿ ರೇಡಿಯೊದಲ್ಲಿ ಬರಬಹುದು ಎಂದು ತನ್ನ ಕನಸನ್ನು ಇನ್ನೂ ಗಟ್ಟಿ ಮಾಡಿಕೊಳ್ಳುತ್ತಾಳೆ.

**◆ ಅವಕಾಶಕ್ಕಾಗಿ ನಿಮ್ಮ ಪ್ರಯತ್ನ ಹೇಗಿತ್ತು?**

ಐದು ವರ್ಷದಿಂದ ಆಡಿಷನ್ ನೀಡ್ತಾ ಇದ್ದೆ. ಎಲ್ಲೂ ಆಗ್ತಾ ಇರಲಿಲ್ಲ. ಒಂದು ಕಡೆ ಭರವಸೆ ಇರ್ತಾ ಇತ್ತು. ನನ್ನ ದೊಡ್ಡ ಕನಸು ಅದನ್ನು ಪಡೆಯಬೇಕು ಎನ್ನುವ ಹಂಬಲ ಕೂಡ ಇತ್ತು. ಎಂಎಸ್‌ಸಿ ನಂತರ ಅಧ್ಯಾಪನ ಇದ್ದಿದ್ದೇ. ಅದನ್ನು ಬಿಟ್ಟು ಬೇರೆ ಏನಾದರೂ ಮಾಡಬೇಕು ಎನ್ನುವುದು ನನ್ನ ಉದ್ದೇಶ ಆಗಿತ್ತು. ಅವಕಾಶಗಳು ಸಿಗದೇ ಇರುವುದರಿಂದ ಉನ್ನತ ಶಿಕ್ಷಣ ಮಾಡಿಯೂ ಜೀವನ ಹಾಳು ಮಾಡಿಕೊಳ್ಳುತ್ತೇನೋ ಎನ್ನುವ ಆತಂಕವೂ ಇತ್ತು. ಅಧ್ಯಾಪಕ ಕೆಲಸಗಳಿಗೆ ಸಂದರ್ಶನಗಳನ್ನೂ ನೀಡುತ್ತಿದ್ದೆ. ಆದರೂ ಆ ಬಗ್ಗೆ ಅಷ್ಟು ಸಮಾಧಾನ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಕನಸಿನ ಅಭಿನಯಕ್ಕೆ ಹಸುರು ನಿಶಾನೆ ಸಿಕ್ಕಿತು. ಅಷ್ಟರಲ್ಲಿ ಲಾಕ್ ಡೌನ್ ಶುರುವಾಗಿ ಕೈಗೆ ಬಂದ ತುತ್ತು ಬಾಯಿ ಬರದೆ ಇದ್ದರೆ ಏನು ಗತಿ ಎಂದು ಯೋಚಿಸಿದ್ದೂ ಇದೆ.



**◆ ಬಣ್ಣ ಹಚ್ಚಿದ ಸಂದರ್ಭದಲ್ಲಿ ಆದ ಮನೋವ್ಯಾಪಾರ ಹೇಗಿತ್ತು?**

ನನ್ನನ್ನು ಆಯ್ಕೆ ಮಾಡಿದ್ದಾಗಿ ಕರೆ ಬಂದಾಗಲೇ ಖುಷಿ ಆಗಿದ್ದೆ. ಮೊದಲ ದಿನ ಬಣ್ಣ ಹಚ್ಚಿ ‘ನಕ್ಷತ್ರ’ ಆದಾಗಿನ ಸಂತೋಷ ಮಾತಿಗೆ ಸಿಗುವುದಿಲ್ಲ. ನನಗೆ ಸಿಕ್ಕ ಪಾತ್ರಕ್ಕೆ ನ್ಯಾಯ ಕೊಡುವುದೇ ನನ್ನ ಧರ್ಮ ಎಂದು ಆ ಕ್ಷಣವೇ ಸಂಕಲ್ಪ ಮಾಡಿಕೊಂಡೆ. ನನ್ನನ್ನು ಜನ ಗುರುತಿಸಿದ್ದಾರೆ. ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ನನಗಿದೆ. ಸದ್ಯ ಅಭಿನಯವೇ ನನ್ನ ಆದ್ಯತೆ. ಗಣಿತದಲ್ಲಿ ಪಿಎಚ್‌ಡಿ ಮಾಡುವ ಉದ್ದೇಶ ಕೂಡ ಇದೆ. ಕಥೆ ತುಂಬ ಕುತೂಹಲದಾಯಕವಾಗಿದೆ. ಒಬ್ಬ ನಟಿಯಾದ ನನಗೆ ಕಥೆಯ ಮುಂದಿನ ಘಟ್ಟ ತಿಳಿಯುವ ಕಾತರ ಇರಬೇಕಾದರೆ ವೀಕ್ಷಕರಿಗೆ ಎಷ್ಟು ಇರಬಹುದು ಎಂದು ಅನಿಸಿದೆ. ಕಥೆ ತುಂಬ ಚೆನ್ನಾಗಿದೆ.

**◆ ಆಡಿಷನ್ ದಿನಗಳನ್ನು ನೆನಪಿಸಿಕೊಂಡರೆ...**

ಆಡಿಷನ್ ತುಂಬ ನೀಡ್ತಾ ಇದ್ದೆ. ಮನೆಯಲ್ಲಿ ಸಮಯ ವ್ಯರ್ಥ ಮಾಡಿಕೊಳ್ಳುತ್ತಿದ್ದೀಯಾ ಸುಮ್ಮನೇ ಅಭ್ಯಾಸ ಮಾಡು ಎಂದು ಹೇಳುತ್ತಿದ್ದರು. ಹಾಗೆ ಹೇಳಿದಾಗೆಲ್ಲ ಇದೊಂದು ಅವಕಾಶ ಕೊಡಿ ಎಂದು ನಾನು ಕೇಳಿಕೊಳ್ಳುತ್ತಿದ್ದೆ. ಕೊನೆಗೆ ಕೆಲಸವನ್ನು ಹುಡುಕಿಕೊಳ್ಳುತ್ತೇನೆ ಎಂದು ಸಮಾಧಾನ ಮಾಡುತ್ತಿದ್ದೆ. ನನ್ನ ಪೋಷಕರು ಬೆಂಬಲಕ್ಕೆ ನಿಂತಿದ್ದು ಖುಷಿಯ ಸಂಗತಿ. ಅವರಿಗೂ ಬೇಸರ ಇರ್ತಾ ಇತ್ತು. ಹುಡುಕಿ ಹುಡುಕಿ ಆಡಿಷನ್‌ಗೆ ಹೋಗ್ತಾ ಇದ್ದೆ. ವಿಡಿಯೊ ಕಳಿಸಲು ಕೇಳ್ತಾ ಇದ್ದರು. ಮೈಬಣ್ಣದ ಕಾರಣಕ್ಕೋ ಏನೋ ಯಾವ ಪಾತ್ರವೂ ನನಗೆ ಆಗಿ ಬರಲಿಲ್ಲ.

■ ರಾಘವೇಂದ್ರ ಕೆ.